# ನಿನ್ನನೇ ನಂಬಿದೆ ನೀರಜ ನಯನ

(Version – 1)

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 338.
2. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao, page No. 338.
3. **Note:** The lyrics mentioned in Ref. 1 and Ref. 2 are fully matching and are almost similar to that of the singer.
4. **Note:** There is one more version with different set of lyrics. Even Ankita is different. Hence, it is listed as Version – 2.
5. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the books of Samagra Dasa Sahitya, published by Kannada & Culture Dept., Govt of Karnataka, Bengaluru and also in the books of Gorebala Hanumantha Rayaru.

ರಾಗ: ಆನಂದ ಭೈರವಿ ತಾಳ: ಏಕ

ನಿನ್ನನೇ ನಂಬಿದೆ ನೀರಜನಯನ
ಎನ್ನ ಪಾಲಿಸೋ ಇಂದಿರಾ ರಮಣ ॥ ಪ ॥

ಗೌತಮ ಮುನಿಯ ಶಾಪದಲಿ ಅಹಲ್ಯೆಯು
ಪಥದೊಳು ಶಿಲೆಯಾಗಿ ಮಲಗಿರಲು
ಪತಿತ ಪಾವನ ನಿನ್ನ ಪಾದ ಸೋಕಿ ಸತಿಯಾಗೆ
ಅತಿಶಯದಿ ಭಕುತರನು ಕಾಯಿದನೆಂಬೋದು ಕೇಳಿ ॥ 1 ॥

ಬಲವಂತ ಉತ್ತಾನಪಾದರಾಯನಣುಜನ
ಮಲತಾಯಿ ನೂಕಲಡವಿಯೊಳಗೆ
ಜಲಜಾಕ್ಷ ನಿನ್ನನು ಕುರಿತು ತಪವಿರಲಾಗೆ
ನೀನವಗೆ ಧ್ರುವ ಪಟ್ಟ ಕಟ್ಟಿದ್ದು ಕೇಳಿ ॥ 2 ॥

ಸುರ ನರ ಲೋಕದಿ ಪುಣ್ಯದ ಜನರನ್ನು
ಪೊರೆಯ ಬೇಕೆಂದು ವೈಕುಂಠದಿಂದ
ಸಿರಿ ಸಹಿತದಿ ಬಂದು ಶೇಷಾಚಲದಿ ನಿಂದು
ಕರುಣಿ ಶ್ರೀ ಪುರಂದರ ವಿಠಲನೆಂಬುದ ಕೇಳಿ ॥ 3 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಗೌತಮ ಮುನಿಯ** = ರಾಮಾಯಣದಲ್ಲಿ ಬರುವ

**ಬಲವಂತ** = ಧ್ರುವೋಪಾಖ್ಯಾನ ಬರುವ

**ಸುರ ನರ ಲೋಕದಿ** = 'ತ್ವಕ್ತ್ವಾ ವೈಕುಂಠ ಮುತ್ತಮಂ, ಸ್ವಾಮಿ ಪುಷ್ಕರಿಣಿ ತೀರೇ ರಮಾಯ ಸಹ ಮೋದತೇ ' ಎಂಬ ಸ್ಥಳ ಪುರಾಣೋಕ್ತಿಯ ಛಾಯೆ

**ಹರಿ ಸರ್ವೋತ್ತಮನಹುದೆಂಬ ಬಾಲಕ** = ಪ್ರಹಲ್ಲಾದ

**ನರಹರಿ** = ನರಸಿಂಹ

**ವಿಶ್ವಾತ್ಮಕ** = ವಿಶ್ವವೆಂಬ ಹೆಸರುಳ್ಳವ

**ಇಳೆಗೊಡೆಯ** = ಉತ್ತಾನ ಪಾದರಾಜ

**ಆ ಲಲನೆ** = ಸುರುಚಿ

**ಅರ್ಭಕ** = ಧ್ರುವ

**ಧ್ರುವ ಪಟ್ಟ** = ಸ್ಥಿರ ಪಟ್ಟ

**ಗೌತಮ ಸತಿ** = ಅಹಲ್ಯೆ

**ಜಗದೇಕ ಮಾತೆ** = ಸೀತಾ ದೇವಿ

**ಡೊಂಬೆ** = ನಟನೆ

**Classification:** Keerthane
**Ankita:** sri purandara vittala
**Location:** Tirupati
**Category:** Vishnu aradhane, Vishnu Stuti
**Sub-Category:** Vishnu, draupadi, Krishna, asura, Narasimha, prahallada, niru, mosale, gaja, chakra, veda, bhumi, Dhruva, ahalya, shapa, muni, hrudaya, loka, tayi,

tande, ravana, vibhishana, shiva, ambarisha, shesha, smarane, ajamila, mukti, sura, punya, vaikunta, kaadu, srinivasa,

**Pravachana:** NA

**Explanation:** NA